ಕೊಡುವುದಕ್ಕೆ ಆಗುತ್ತದೆಯೇ? ಇದೆಲ್ಲಾ ಬೇಜವಾಬ್ದಾರಿಯಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮತ್ತು ಆಯವ್ಯಯದಲ್ಲಿ 60 ಸಾವಿರ ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದಂತಹ ಇವರ ಭರವಸೆ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ಭರವಸೆಯಾಗುತ್ತಿದೆ. ಆದುದರಿಂದ ಸರಕಾರ ಈ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಿ ಇಲ್ಲಿ ಉತ್ತರ ಕೊಟ್ಟು ಇದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಂಗಾರುಪೇಟೆ ತಾಲ್ಲೂಕಿನ ಸಹಕಾರ ಸಂಸ್ಥೆಗಳು 10,000 ರೂಪಾಯಿ ಕೆಳಗೆ ವರಮಾನ ಇರತಕ್ಕಂತಹವರಿಂದ ಸಾಲ ವಸೂಲಿ ಮಾಡಲು ಪ್ರಾರಂಭ ಮಾಡಿದ್ದು ಹರಾಜನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಈ ತಿಂಗಳ 4 ರಂದು ತಮಗೆ ನೋಟೀಸು ಕೂಡ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಬೈರೇಗೌಡರು ಎತ್ತಿದಂತಹ ವಿಚಾರದ ಬಗ್ಗೆ ಒಂದು ಹೇಳಿಕೆ ಇದೆ. ಈಗ ನಾವು ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವ ಹಂತದಲ್ಲಿದ್ದೇವೆ. ಇದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರೂ ಕೂಡ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ....

ಅಧ್ಯಕ್ಷರು : ಜರೂರು ವಿಚಾರಗಳನ್ನು ಕೆಲವು ಸಾರಿ ಸದನದ ಯಾವುದೇ ಭಾಗದಿಂದ ಸದಸ್ಯರುಗಳು ಸದನದ ಗಮನ ಸೆಳೆಯಬೇಕೆಂದು ಹೇಳಿದರೆ ಅದನ್ನು ತಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮನ್ನು ನಾವೇ ನಿಯಂತ್ರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಸದನದ ಮುಂದೆ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ ಆಮೇಲೆ ನೋಡೋಣ.

ಸಭೆಯ ಮುಂದಿಡಲಾಡ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. Annual Administration Report of Upper krishna Project Command Area Development Authority Bheemarayanagudi for the year 1989-90 as required under Section 25 of Command Area Development Act, 1980.

2. 20th Annual Report and Accounts of Karnataka Film Industry Develpment Corporationn Ltd, for the year 1987-88.

3. 8th Annual Report of Jungle Lodges and Resorts Ltd, for the year 1987-88 as required under Section 619 (A) of the Companies Act, 1056.

II. Sri Dharam Singh Narayan Singh (Minister for Home) 2 leg to lay the

1. Third Annual Report of Karnataka State Police Housing Corporation Ltd, for the year 1987-88.

2. Fourth Annual Report of Karnataka State Police Housing Corporation Ltd, for the year 1988-89. as required under Section 619 (A) of the Companies Act, 1956.

III. Sri K.J. George (Minister for Housing and Urban Development) I beg to lay :

1. The Audit Reports of the Following Urban Development Authorities.

(i) Hassan for the year 1987-88 and 1988-89

(ii) Chickmangalore for the year 1988-89 and 1989-90 as required under Section 48 (5) of Karnataka Urban Development Authority Act, 1987.

Mr. Speaker : Papers laid.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ಒಂದು ಬಹಳ ಮುಖ್ಯವಾದ ವಿಚಾರ ಇದೆ. ರೈತರ ಭೂಮಿಯನ್ನು ಹರಾಜು ಮಾಡುತ್ತಿದ್ದಾರೆ...

ಅಧ್ಯಕ್ಷರು : ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಡತಕ್ಕಂತಹ ಕಾಲದಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸಹಕಾರಿ ಸಾಲಕ್ಕೆ ಸಂಬಂಧಪಟ್ಟಂತೆ ಹರಾಜು ನಡೆಯುತ್ತಿದೆ.

(ಗೊಂದಲ)

ಶ್ರೀ ಹೆಚ್.ಏಕಾಂತಯ್ಯ : ಸಹಕಾರಿ ಸಾಲವನ್ನು ವಸೂಲು ಮಾಡಲು ಹರಾಜು ನಡೆಯುತ್ತಿದೆ. ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಹೇಳತಕ್ಕಂತಹ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ನಮ್ಮ ಕ್ಷೇತ್ರದಲ್ಲಿ ಯಾರ್ಯಾರು 10 ಸಾವಿರ ರೂಪಾಯಿ ಒಳಗೆ ಸಾಲವನ್ನು ತೆಗೆದುಕೊಂಡಿದ್ದಾರೆ ಅವರ ಸಾಲವನ್ನು ಮನ್ನಾ ಮಾಡುತ್ತಾರೆಂದು ಹೇಳಿದ್ದೇವೆ. ಸಾಲ ಹತ್ತು ಸಾವಿರ ರೂಪಾಯಿಗಳ ಒಳಗೆ ಇದ್ದರೂ ಸಹ ಇವತ್ತು ಪಿಕ್ ಅಂಡ್ ಚೂಸ್ ಮಾಡಿಕೊಂಡು ಅವರ ಆಸ್ತಿಗಳನ್ನು ಹರಾಜು ಮಾಡಿ ಸಾಲವನ್ನು ವಸೂಲಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಕೊನೆಯ ಪಕ್ಷ ಅದರ ಬಗ್ಗೆ ನೋಡಿ.

ಶ್ರೀ ಹೆಚ್. ಏಕಾಂತಯ್ಯ : ಇದರ ಬಗ್ಗೆ ತಾವು ಏನಾದರೂ ಸೂಚನೆ ಕೊಟ್ಟಿದ್ದೀರ.

ಅಧ್ಯಕ್ಷರು : ಅದನ್ನು ತಾವು ಬರೆದು ಕಳುಹಿಸಿ, ಅವರು ನೋಡುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಇವತ್ತು ರೈತರ ಆಸ್ತಿಪಾಸ್ತಿಗಳನ್ನು ಹರಾಜು ಮಾಡುವ ಮೂಲಕ ಸಾಲವನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸದನದಲ್ಲಿ ಸರ್ಕಾರ ವಚನ ಕೊಟ್ಟಿದೆ. ಮಾರ್ಚಿ 31 ರವರೆಗೆ ಯಾವುದೇ ಸಾಲವನ್ನು ವಸೂಲಿ ಮಾಡಲು ರೈತರ ಆಸ್ತಿ ಪಾಸ್ತಿಗಳನ್ನು ಹರಾಜು ಮಾಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಸರ್ಕಾರ ಕೊಟ್ಟಿದೆ. ಅದರಲ್ಲಿ ಆಯ್ಕೆಮಾಡಿಕೊಂಡು ಕೆಲವೇ ರೈತರ ಮನೆಗಳನ್ನು ಜಪ್ತಿ ಮಾಡುವುದು ಸರಿಯೆ? ಸರ್ಕಾರ ಇಂತಹ ಕಾರ್ಯಕ್ರಮ ಹಾಕಿಕೊಂಡಿರುವುದು ಸರಿಯೆ? ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಏನು ಜನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಬಿಟ್ಟರು, ಬಿಡ್‌ದಾರರು ಯಾರೂ ಮುಂದೆ ಬರಲಿಲ್ಲವೆಂದು ತಹಶೀಲ್ದಾರ್‌ರವರು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಎಲ್ಲಿ ಸದಸ್ಯರು ತಿಳಿದುಕೊಂಡಿರುವುದು, ಮಾರ್ಚಿ 31ರವರೆಗೆ ನಾವು ಬಲವಂತದಿಂದ ಸಾಲವನ್ನು ವಸೂಲಿ ಮಾಡುವುದಿಲ್ಲವೆನ್ನುವ ಮಾತು ಹಿಂದಿನ ಸರ್ಕಾರದ ಹೇಳಿಕೆ. ಮೊನ್ನೆ ರೈತಸಂಘದವರು ಮುಖ್ಯ ಮಂತ್ರಿಗಳು ಜೊತೆ ಮಾತುಕತೆ ಮಾಡಿದ ಮೇಲೆ, ಅವರು ಕೊಟ್ಟಂತಹ ಆಶ್ವಾಸನೆ ಏನೆಂದರೆ, ಕೇಂದ್ರಕ್ಕೆ ಸ್ಪಷ್ಟೀಕರಣ ಕೇಳಿ ಪತ್ರ ಬರೆದಿದ್ದೇವೆ, ಅಲ್ಲಿಂದ ಸ್ಪಷ್ಟೀಕರಣ ಬರುವವರಿಗೆ ನಾವು ವಸೂಲಿ ನಿಲುಗಡೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನನಗೆ, ನನ್ನ ಮೂಲಕ ರಾಜ್ಯದ ರೈತರಿಗೆ ಕೊಟ್ಟಿದ್ದಾರೆ. ಈಗ ನಮ್ಮ ಬೇತಮಂಗಲದ ಶಾಸಕರು 10 ಸಾವಿರ ರೂಪಾಯಿ ಒಳಗಡೆ ಸಾಲ ಇರುವವರ ಮನೆಗಳನ್ನು ಜಪ್ತಿ ಮಾಡಿ ಹರಾಜು ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಮುಖ್ಯ ಮಂತ್ರಿಗಳು ಬಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ನನಗೆ ಕೊಟ್ಟ ಆಶ್ವಾಸನೆ ನಿಜವೋ ಅಥವಾ ಸುಳ್ಳೋ ಗೊತ್ತಾಗುತ್ತದೆ. ಮುಂದಿನ ಕ್ರಮವನ್ನು ನಾವು ತೀರ್ಮಾನ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದೊಂದು ಅತಿ ಜರೂರಾಗಿರತಕ್ಕ ವಿಚಾರ.

ಶ್ರೀ ಸಿ. ಬೈರೇಗೌಡ : ವಿದ್ಯುಚ್ಛಕ್ತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದರ ಬಗ್ಗೆ ಮಂತ್ರಿಗಳು ಹೇಳಿಕೆ ಕೊಡುವುದು ಇದ್ದರೆ ಅದು ಮೊದಲು ಆಗಬಹುದು.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕೋಲಾರ ಜಿಲ್ಲೆಯ ಕೋಲಾರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಂಗಾರಪೇಟೆ ಮತ್ತ ಇತರ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ 15 ಗಂಟೆಗಳ ಕಾಲ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತಿದೆ. ಚಿಂತಾಮಣಿ ತಾಲ್ಲೂಕಿನಗೆ 12ನೇ ಮಾರ್ಚ್ 1991 ರಂದು ಬೆಳಿಗ್ಗೆ 10-37 ಗಂಟೆಯಿಂದ ಸಂಜೆ 5-30 ಗಂಟೆವರೆಗೆ ಗೌರಿಬಿದನೂರು ಚಿಂತಾಮಣಿಯ 66 K.VS ಪ್ರಸರಣ ಲೈನ್, ಬೈಲಸಂದ್ರದ ಬಳಿ ಕಡಿದುಹೋಗಿ ಅಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗೆ ಅಡಚಣೆ ಉಂಟಾಯಿತು. ಕಡಿದು ಹೋದ ಲೈನನ್ನು ದುರಸ್ತಿ ಮಾಡಿ ೧೨ನೇ ಮಾರ್ಚ್ 1991 ರಂದು ಸಂಜೆ 5.30 ಗಂಟೆಗೆ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವೃತ್ತದ ಅಧೀಕ್ಷಕ ಅಭಿಯಂತರ ವಿದ್ಯುತ್ ಅವರನ್ನು ಮತ್ತು ಚಿಕ್ಕಬಳ್ಳಾಪುರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರನ್ನು ಚಿಂತಾಮಣಿಗೆ ಕಳುಹಿಸಿದ್ದು, ಅವರು ಧರಣಿ ಕುಳಿತಿರುವ ರೈತರನ್ನು ಸಾಂತ್ವನಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ತಿಳಿಸಿರುವಂತೆ 8ನೇ ಮಾರ್ಚ್ 1991 ರಂದು ಕೋಲಾರದಲ್ಲಿ 2-5 ಎಂ.ವಿ. 66-11 ಕೆ.ವಿ. ಪರಿವರ್ತಕಗಳನ್ನು ಚಾಲನೆ ಮಾಡಲಾಗಿದೆ. ಇದರಿಂದಾಗಿ, ಕೋಲಾರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿ ಉತ್ತಮಗೊಂಡಿದೆ.

ಮುಳಬಾಗಿಲಿನ 66 ಕೆ.ವಿ. ಲೈನು ಮುಗಿಯುವ ಹಂತದಲ್ಲಿದ್ದು, ಈ ತಿಂಗಳ ಕೊನೆಯ ವೇಳೆಗೆ ಇದರ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ವಿಜಯಪುರ 66 ಕೆ.ವಿ. ಲೈನು ಒಂದು ವಾರದಲ್ಲಿ ಮುಗಿಯುತ್ತದೆ. ಈ ಹೊಸ ಲೈನುಗಳನ್ನು ಚಾಲನೆ ಮಾಡುವುದರಿಂದ ಮುಳಬಾಗಿಲು, ವಿಜಯಪುರ, ಶಿಡ್ಲಘಟ್ಟಗಳಲ್ಲಿ ವಿದ್ಯುತ್ ಬಲ ಉತ್ತಮಗೊಳ್ಳುತ್ತದೆ. ಚಿಕ್ಕಬಳ್ಳಾಪುರಕ್ಕೆ ಪೀಣ್ಯದಿಂದ ಹಿಂದಿದ್ದ ಸರಬರಾಜನ್ನು ತಪ್ಪಿಸಿ, ಈಗ ಸುಮಾರು 15 ದಿವಸಗಳಿಂದ ಗೌರಿಬಿದನೂರಿನಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿರುವುದರಿಂದ ಅಲ್ಲೂ ಸಹ, ವಿದ್ಯುತ್ ಬಲವು ಉತ್ತಮಗೊಂಡಿದೆ. ವಿದ್ಯುಚ್ಛಕ್ತಿ

ಮಂಡಳಿಯು ರೈತರ ಮತ್ತು ಎಲ್ಲಾ ವರ್ಗದ ಬಳಕೆದಾರರ ಕಷ್ಟ-ಸುಖಗಳನ್ನು ಗಮನದಲ್ಲಿರಿಸಿ, ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ನಿವಾರಿಸುವುದಕ್ಕೆ ಸರ್ವ ವಿಧಗಳಲ್ಲೂ ಪ್ರಯತ್ನಗಳನ್ನು ಮಾಡುತ್ತಿದೆ. ಮಂಡಳಿಯ ಅಧ್ಯಕ್ಷರು, ಇತರ ಉನ್ನತ ಅಧಿಕಾರಿಗಳೊಂದಿಗೆ ಕೋಲಾರ ಜಿಲ್ಲೆಯ ಮೇಲ್ಕಂಡ ತಾಲ್ಲೂಕುಗಳಿಗೆ 28ನೇ ಫೆಬ್ರವರಿ 1991 ರಂದು ಖುದ್ದಾಗಿ ಭೇಟಿ ನೀಡಿ ರೈತರು ಮತ್ತು ಸ್ಥಳೀಯ ಶಾಸಕರುಗಳನ್ನು ಸಂಪರ್ಕಿಸಿ ಅವರ ಕುಂದು-ಕೊರತೆಗಳನ್ನು ಅರಿತು ತುರ್ತು ಕೆಲಸಗಳಿಗೆ ಸ್ಥಳದಲ್ಲೇ ಆದೇಶಗಳನ್ನು ನೀಡಿ, ಪರಿಸ್ಥಿತಿ ಉತ್ತಮಗೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇನ್ನೂ ಸಮಸ್ಯೆ ಉಳಿದಿದ್ದರೆ ನಾವು ಕೆ.ಇ.ಬಿ. ಯ ಉನ್ನತ ಅಧಿಕಾರಿಗಳನ್ನು ಪುನಃ ಕಳಿಸೋಣ. ಅದರ ಮಾಹಿತಿ ತರಿಸಿ ಎಲ್ಲೆಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ. ಆಮೇಲೆ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಮಾತನ್ನು ಹೇಳಿದ್ದರು. 60 ಸಾವಿರ ಪಂಪುಸೆಟ್ಟುಗಳಿಗೆ ನೀವು ವಿದ್ಯುತ್ ಸರಬರಾಜು ಒದಗಿಸುತ್ತೇವೆ ಎಂದು ಹೇಳಿದ್ದೀರಿ, ಇನ್ನೂ ಮಾಡಿಲ್ಲವೆಂದು ಹೇಳಿದರು. ಮಾರ್ಚ್ 1ನೇ ವಾರದವರೆಗೆ 60 ಸಾವಿರದಲ್ಲಿ 51,902 ಪಂಪುಸೆಟ್ಟುಗಳಿಗೆ ಸರ್ವಿಸ್ ಕೊಟ್ಟಿದ್ದೇವೆ. ಇದು ಬಹಳ ಕಡಿಮೆ ಸಾಧನೆ ಏನೂ ಅಲ್ಲ. ಈ ಒಂದು ವೇಗದಲ್ಲಿ ಹೋದಾಗ ಮಾರ್ಚ್ ಅಂತ್ಯದ ವೇಳೆಗೆ ಏನು ಟಾರ್ಗೆಟ್ ಅನ್ನು ಕೊಟ್ಟಿದ್ದೇವೆ, ಈ ಗುರಿಯನ್ನು ಖಂಡಿತವಾಗಿ ಮುಟ್ಟುತ್ತೇವೆ.

ಅಧ್ಯಕ್ಷರು : ಪಾರ್ಥಸಾರಥಿಯವರು ಏನು ಉಪವಾಸ ಮಾಡುತ್ತಿದ್ದಾರೆ, ನೀವು ತಕ್ಷಣ ಹೋಗಿ ಉಪವಾಸದಿಂದ ಅವರನ್ನು ಏಳಿಸಿ. ಅವರ ಆರೋಗ್ಯ ಸರಿಯಿಲ್ಲವೆಂದು ಹೇಳಿದ್ದೀರಿ. ಆದ್ದರಿಂದ ತಕ್ಷಣ ಅವರನ್ನು ಏಳಿಸಿ.

ಶ್ರೀ ಸಿ. ಬೈರೇಗೌಡ : ಸರ್ಕಾರಕ್ಕೂ ನಮಗೂ ತಕರಾರು ಇರತಕ್ಕದ್ದು ಎಲ್ಲಿ ಎಂದರೆ, ದಿವಸದಲ್ಲಿ 15 ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. 15 ಗಂಟೆ ಅಲ್ಲ, ಒಂದೊಂದು ದಿವಸ 5-6 ಗಂಟೆ ಕೂಡ ವಿದ್ಯುತ್ ಸರಬರಾಜು ಆಗುತ್ತಿಲ್ಲ.

ಅಧ್ಯಕ್ಷರು : ಕಾರಣ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಇದು ಪ್ರತಿನಿತ್ಯ ಆಗುತ್ತಿರುವಂಥಾದ್ದು. ಮಾನ್ಯ ಮಂತ್ರಿಗಳು 15 ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಎಂದು ಹೇಳುವುದು ಬರೇ ಕಾಗದದ ಮೇಲಿದೆ ಅಷ್ಟೆ. ವಾಸ್ತವಿಕವಾಗಿ ಈ ಪರಿಸ್ಥಿತಿ ಅಲ್ಲಿ ಇಲ್ಲ. ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಬರುವಹಾಗಿದ್ದರೆ ಬನ್ನಿ, ಈಗಲೇ ಹೋಗೋಣ, ನೀವು ಹೇಳಿದ ಹೇಳಿಕೆ ನಿಜವಾದರೆ ನಾನು ಬೇಷರತ್ ಕ್ಷಮೆ ಬೇಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಹೇಳಿಕೆಯನ್ನು ತಪ್ಪಾಗಿ ಕೊಟ್ಟಿದ್ದೀರಿ, ಅಥವಾ ಮರೆಮಾಚಿ ಕೊಟ್ಟಿದ್ದೀರಿ ಎಂದು ನಾನು ಆಪಾದನೆ ಮಾಡುತ್ತಿಲ್ಲ. ತಾವು ಪರಿಸ್ಥಿತಿ ಹೀಗೆ ಇದೆ ಎಂದು ಹೇಳಿದ್ದೀರಿ. ಒಂದು ಮಾತನ್ನು ತಮಗೆ ಹೇಳುವುದಿದ್ದರೆ ಕೋಲಾರ ಜಿಲ್ಲೆಯಲ್ಲಿ ಈಗ ಆಗಿರತಕ್ಕಂಥ ಇನ್‌ಫಾಸ್ಟ್ರಕ್ಚರ್ ಎಲೆಕ್ಟ್ರಿಸಿಟಿ ಫೆಸಿಲಿಟಿ ಏನಿದೆ, ಅದು ಬಹುಶಃ ಕರ್ನಾಟಕ ರಾಜ್ಯದ ಬೇರೆ ಯಾವ ಜಿಲ್ಲೆಯಲ್ಲಿ ಆಗಿದೆಯೆಂದು ನನಗನ್ನಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ಮಾತನ್ನು ರೈತರ ಎದರಿಗೆ ಬಂದು ಹೇಳಿ. ಸ್ಥಳ ಪರಿಶೀಲನೆ ಮಾಡಿ, ಇದನ್ನು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಎರಡನೆಯ ಪ್ರಶ್ನೆ ಏನೆಂದರೆ, ಕೆಲವು ಸಮಸ್ಯೆಗಳು ಇನ್ನೂ ಕೂಡ ಪರಿಹಾರ ಆಗತಕ್ಕದ್ದು ಇದೆ ಆಗಿಲ್ಲ ಎಂದು

ಹೇಳುತ್ತಾರೆ. ಇದಕ್ಕೆ ಕೆ.ಇ.ಬಿ.ಯ ಉನ್ನತ ಅಧಿಕಾರಿಯನ್ನು ಇವತ್ತೇ ಕಳಿಸಿ, ಅದನ್ನು ಪರಿಶೀಲನೆ ಮಾಡಿ...

ಶ್ರೀ ಸಿ. ಬೈರೇಗೌಡ : ಚೀಫ್ ಇಂಜಿನಿಯರ್ ಅವರನ್ನೇ ಕಳಿಸಿ

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲಿ, ಅವರನ್ನೇ ಕಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಎಲ್ಲ ವಿರೋಧ ಪಕ್ಷಗಳ ಮುಖಂಡರ ಸಭೆ ಕರೆಯುವುದಾಗಿ ಹೇಳಿದ್ದೀರ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಮಸ್ಯೆ ಇರತಕ್ಕಂಥ ಜಿಲ್ಲೆಗಳ ಶಾಸಕರ ಸಭೆ ಮಾಡುವುದಕ್ಕೆ ಅಡ್ಡಿ ಇಲ್ಲ. ಸಭೆ ಕರೆಯುವುದು ಒಂದು ಭಾಗ. ಇದಕ್ಕಿಂತ ಹೆಚ್ಚಾಗಿ ಆಕಸ್ಮಿಕವಾಗಿ ಪ್ರಚಲಿತವಾದ ಸಮಸ್ಯೆಗಳು ಏನಿವೆ, ಅದನ್ನು ಪರಿಹಾರ ಮಾಡುವುದಕ್ಕೆ K.E.B. is fully engaged in this task. ಅದನ್ನು ಮಾಡೋಣ. ಮುಖ್ಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಸಭೆ ಕರೆಯುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಇನ್ನೊಂದು ಏನೆಂದರೆ..

ಅಧ್ಯಕ್ಷರು : ಚರ್ಚೆ ಸಾಧ್ಯವಾಗುವುದಿಲ್ಲ. ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಚೀಫ್ ಇಂಜಿನಿಯರ್ ಬರುತ್ತಾರೆ, ಅವರ ಜೊತೆಗೆ ನೀವು ಹೋಗಿ ಹೇಳಿ.

ಶ್ರೀ ಸಿ. ಬೈರೇಗೌಡ : ಹೈಟೆನ್‌ಷನ್ ಪವರ್‌ನ್ನು ಕೊಡತಕ್ಕಂಥ...

ಅಧ್ಯಕ್ಷರು : ಸಾಕು ಬಿಡಿ.

ಶ್ರೀ ಸಿ. ಬೈರೇಗೌಡ ; ಸರ್ಕಾರದಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು : ಬೈರೇಗೌಡ, ತಾವು ಸಾಕಷ್ಟು ಸದನದ ಗಮನ ಸೆಳೆದಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಆದರೆ ಸರ್ಕಾರದವರು ಉತ್ತರ ಹೇಳಿಲ್ಲ.

ಅಧ್ಯಕ್ಷರು : ಅವರು ಉತ್ತರ ಹೇಳಿ ಆಯಿತು. ಚೀಫ್ ಇಂಜಿನಿಯರ್ ಅವರನ್ನು ಕಳಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಈಗ ಶ್ರೀ ಎಂ.ವಿ. ವೆಂಕಟಪ್ಪ...

ಶ್ರೀ ಸಿ. ಬೈರೇಗೌಡ : ಕಾರ್ಖಾನೆಗಳಿಗೆ ಪವರ್ ಕಟ್ ಹೆಚ್ಚುಮಾಡಿ ಅದನ್ನು ವ್ಯವಸಾಯಕ್ಕೆ ಕೊಡಿ ಎಂದು ಹೇಳುತ್ತಿದ್ದೇನೆ. ಇದನ್ನು ಏಪ್ರಿಲ್‌ಮಧ್ಯಭಾಗದವರೆಗೆ ಕೊಟ್ಟರೂ ಸಾಕು. 15-20 ದಿವಸ ಹೆಚ್ಚಿಗೆ ಕರೆಂಟ್‌ನ್ನು ವ್ಯವಸಾಯಕ್ಕೆ ಕೊಡಿ, ಅದು ಮಾಡುವುದಕ್ಕೆ ಸಾಧ್ಯವಿದೆ, ಮಾಡಬಹುದು, ಹಿಂದೆ ಕೂಡ ಮಾಡಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಮುಳಬಾಗಿಲಿನಲ್ಲಿ 66 ಕೆ.ವಿ.ಲೈನ್ ಏನಿದೆ, ಅದನ್ನು 31ನೇ ಮಾರ್ಚಿಯೊಳಗೆ ಮುಗಿಸುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದರು, ಈಗ ಮಂತ್ರಿಗಳೂ ಹೇಳುತ್ತಿದ್ದಾರೆ. ನಮಗೆ ಬಂದಿರತಕ್ಕ ಮಾಹಿತಿ ಪ್ರಕಾರ, ಮಾರ್ಚ್ 31 ರೊಳಗೆ ಮುಗಿಯುವ ಚಾನ್ಸಸ್ ಇರುವುದಿಲ್ಲ. 31ನೇ ತಾರೀಖಿನೊಳಗೆ ಆಗದಿದ್ದರೆ ಅಂತಹ ಅಧಿಕಾರಿಗಳನ್ನು ಏನು ಮಾಡಬೇಕು.

ಶ್ರೀ ಸಿ. ಬೈರೇಗೌಡ : ನಮ್ಮ ಪರಿಸ್ಥಿತಿಯನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಕಾರಣ ಏನೆಂದರೆ, ಸಾವಿರಾರು ಎಕರೆಯಲ್ಲಿ ಬೆಳೆದಿರತಕ್ಕ ಟೊಮ್ಯಾಟೊ, ಆಲೂಗೆಡ್ಡೆ ಮತ್ತು ತರಕಾರಿ ಬೆಳೆಗಳು ಎಲ್ಲವೂ ಸರ್ವನಾಶವಾಗುತ್ತಿವೆ. ರೈತರ ಬಗ್ಗೆ ಅದರಲ್ಲೂ ನಮ್ಮ ಜಿಲ್ಲೆಯ ರೈತರಿಗೆ ಕುಡಿಯುವುದಕ್ಕೆ ನೀರು ಸಿಕ್ಕುತ್ತಾ ಇಲ್ಲ. ದಯಮಾಡಿ ನಮ್ಮ ಮೇಲೆ ಕನಿಕರ ತೋರಿಸಬೇಕೆಂದು ವಿನಂತಿಸುತ್ತೇನೆ. ಅಲ್ಲಿನ

ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೋ ಅಷ್ಟು ಗಂಭೀರವಾಗಿ ಸರ್ಕಾರ ಪರಿಶೀಲನೆ ಮಾಡುತ್ತಾ ಇಲ್ಲ, ಗಮನಕ್ಕೆ ತೆಗೆದುಕೊಂಡಿಲ್ಲ. ಅದೇ ನಮಗೆ ಇರತಕ್ಕ ತಾಪತ್ರಯ. ಆದುದರಿಂದ ಅವರು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಇವತ್ತಿಗೆ ಮೂರನೇ ದಿವಸ.

ಅಧ್ಯಕ್ಷರು : ಬೆಳೆಯನ್ನು ಉಳಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ...

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಪ್ರಯತ್ನವನ್ನು ಇವತ್ತು ಮಾಡುತ್ತಿದ್ದೇವೆ. ಪ್ರಶ್ನೆ ಬರೀ ವಿದ್ಯುತ್ ಕೊಡುವುದಿಲ್ಲ, ನಾನು ವಿಶ್ಲೇಷಣೆಗೆ ಹೋಗುವುದಿಲ್ಲ. ಕೆಲವು ಸಾರಿ ವಿದ್ಯುತ್ ಜಾಸ್ತಿ ಕೊಟ್ಟರೂ ಸಹ, The system is not in a position to absorb in many of the places. ಈ ಪರಿಸ್ಥಿತಿ ಇದೆ, ತಮಗೂ ಗೊತ್ತಿರಬಹುದು. ಯಾವುದೇ ಕೈಗಾರಿಕೆಯನ್ನು ನಿಲ್ಲಿಸಿ, ಅಲ್ಲಿನ ವಿದ್ಯುತ್ ಕೋಲಾರಕ್ಕೆ ಹೋಗತಕ್ಕ ಸಿಸ್ಟಂ ನಮ್ಮಲ್ಲಿ ಇದೆಯೇ? You have to develop that

ಶ್ರೀ ವಾಟಾಳ್ ನಾಗರಾಜ್ : ತಂತಿ ಇದೆ, ಕಂಬ ಇದೆ, ಬೆಳಕು ಮಾತ್ರ ಇಲ್ಲ. ಇಂತಹ ಪರಿಸ್ಥಿತಿ ಉದ್ಭವಾಗಿದೆ. ತಾವು ಹೋದಸಾರಿ ಮಾತನಾಡೋಣ ಎಂದು ಹೇಳಿದಿರಿ...

ಶ್ರೀ ಬಿ.ಹೆಚ್. ಬನ್ನಿಕೋಡ್ : ಪರೀಕ್ಷೆಗಳು ಹತ್ತಿರ ಬಂದಿವೆ. ಮಕ್ಕಳು ಓದುವುದಕ್ಕೂ ಸಾಧ್ಯವಿಲದೇ ಇರುವಷ್ಟು ವೋಲ್ಟೇಜ್ ಇದೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಸಚಿವರ ಗಮನಕ್ಕೆ ಬಂದಿದೆಯೇ ಇಲ್ಲವೋ..

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳುವುದರಲ್ಲಿ ಸಾಕಾದಷ್ಟು ಫೋರ್ಸ್ ಇದೆ. ಸರ್ಕಾರದವರು ಇದರ ಬಗ್ಗೆ ತೀವ್ರ ಚಿಂತನೆ ಮಾಡಬೇಕಾಗಿದೆ. ಕ್ವಾಲಿಟಿ ಆಫ್ ಪವರ್ ಈಗ ಏನು ಬರುತ್ತಿದೆ...

SRI M. VEERAPPA MOILY : The quality of supply will also depend not only on the availability of the power but also the system which has to take the load. There was a time when Maharastra was prepared to give us power but our system was not prepared to receive it. ಈ ಪ್ರಶ್ನೆ ಇದೆ.

(ಗೊಂದಲ)

ಅಧ್ಯಕ್ಷರು : ನಾನು ಏನು ಸಲಹೆ ಮಾಡುತ್ತಿದ್ದೇನೆಂದರೆ ಕಳೆದ ಅಧಿವೇಶನದ ಕೊನೆಯ ದಿವಸ, ತಾವು ಮಾನ್ಯ ಸದಸ್ಯರು ಯಾರಿಗೆ ಇದರ ಬಗ್ಗೆ ಆಸಕ್ತಿ ಇದೆ, ಅವರನ್ನು ಕರೆಸಿ ಸಮಾಲೋಚನೆ ಮಾಡಿ, ಅನಂತರ ಏನಾದರೂ ಪರಿಹಾರ ಹುಡುಕುತ್ತೇವೆಂದು ಹೇಳಿದ್ದೀರಿ, ಈಗ ಅದನ್ನು ಮಾಡಬಹುದು.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದರ ಬಗ್ಗೆ ಸರ್ಕಾರ ಯಾವುದೇ ಕಾರ್ಯಕ್ರಮ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಬೇಕಾಗಿರುವುದು ಬೆಳಕು..

ಅಧ್ಯಕ್ಷರು : ನನಗೆ ಸ್ವಲ್ಪ ಅವಕಾಶ ಕೊಡಿ, ನಾನು ನಿಮಗೆ ಬೆಳಕು ಕೊಡುತ್ತೇನೆ. ಇವತ್ತು ಮಾನ್ಯ ಕೃಷ್ಣಗೌಡ, ಹನಮಂತಗೌಡ ಪಾಟೀಲರ ಜನ್ಮದಿನ. ಅವರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಶ್ರೀ ವಾಟಾಳ್ ನಾಗಾರಾಜ್ : ನಮಗೆ ಬರೀ ತಂತಿ ಕೊಟ್ಟರೆ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೂ ಸ್ವಲ್ಪ ಅವಕಾಶ ಕೊಡಿ, ಬೇರೆ ವಿಚಾರಗಳಿಗೂ ಅವಕಾಶ ಕೊಡಿ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳದೇ ಮಂತ್ರಿಗಳು ಕುಳಿತಿದ್ದಾರೆ.

ಶ್ರೀ ಸಿ.ಬೈರೇಗೌಡ : ಅವರು ಮಲೆನಾಡಿನಿಂದ ಬಂದಿದ್ದಾರೆ ಅವರಿಗೆ ವಿದ್ಯುಚ್ಛಕ್ತಿ ಬೇಕಾಗಿಲ್ಲ, ಅವರು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಎಷ್ಟು ಹೇಳಿದರೂ ನಮಗೆ ಸರಿಯಾದ ಉತ್ತರ ಕೊಡುತ್ತಾ ಇಲ್ಲ. ನಾವು ಕಲ್ಲಿನ ಮೇಲೆ ತಲೆ ಹೊಡೆದುಕೊಂಡ ಹಾಗೆ ಆಗುತ್ತಾ ಇದೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಹೊರಗಡೆ ಹೋಗುವುದೊಂದೇ ಉಳಿದಿರುವ ಮಾರ್ಗ. ಇದು ಸರಿಯಲ್ಲ.

(ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು

ಶ್ರೀ ಸಿ. ಬೈರೇಗೌಡ : ನಮ್ಮ ಜಿಲ್ಲೆಯ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಪ್ರಮಾಣಿಕವಾದ ಪ್ರಯತ್ನ ಮಾಡುತ್ತಾ ಇಲ್ಲ, ಬರೀ ಕಾಗದದ ಮೇಲೆ ಹೇಳಿಕೆ ಕೊಡುತ್ತಾರೆ. 15 ಗಂಟೆ ಕಾಲ ವಿದ್ಯುತ್ ಕೊಡುತ್ತಿದ್ದೇವೆಂದು ಕಾಗದದ ಮೇಲೆ ಹೇಳಿಕೆ ಇದೆ. ಮಾನ್ಯ ವೀರಪ್ಪ ಮೊಯಿಲಿಯವರೇ ಇವತ್ತಿನ ದಿವಸ ಬರಲಿ. ಈ ಮಾತನ್ನು ಹಳ್ಳಿಗಳಲ್ಲಿ ರೈತರ ಮುಂದೆ ಹೇಳಿಲಿ, ಅವರು ಒಪ್ಪಿಕೊಳ್ಳಲಿ, ನಾನು ಅಲ್ಲೇ ಅವರಿಗೆ ಸಾಷ್ಟಾಂಗ ಸಮಸ್ಕಾರ ಮಾಡಿ, ಅವರ ಕ್ಷಮೆ ಬೇಡುತ್ತೇನೆ. ಇವತ್ತು ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ, ತೀವ್ರವಾಗಿದೆ ಬೆಳೆಗೆ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ.?

ಅಧ್ಯಕ್ಷರು : ನಾನು ಏನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಕೆ.ಇ.ಬಿ. ಚೇರ್‌ಮನ್ ಹೋಗಿದ್ದಾರೆ, ಚೀಫ್ ಇಂಜಿನಿಯರ್ಸ್ ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ : ಅದೆಲ್ಲಾ ನಿಜ ಆದರೆ...

ಶ್ರೀ ಎಂ. ವೀರಪ್ಪ ಮೊಯಿಲಿ : ತಾವೇ ನಿಂತು ಬಿಟ್ಟರೆ ನಾವು ಮಾತನಾಡಬೇಕೋ, ಬೇಡವೋ, Whether you want me to reply or not? We cannot just run the House like this. I am sorry.

MR. SPEAKER : You are right. We cannot run the House like this. Certainly, you are right. I concede to the point.

ಶ್ರೀ ಎಂ. ವೀರಪ್ಪ ಮೊಯಿಲಿ : ಫೆಬ್ರವರಿ 25ನೇ ತಾರೀಖು ಕೆ.ಇ.ಬಿ. ಅಧ್ಯಕ್ಷರು ಹೋಗಿದ್ದರು. ಚೀಫ್ ಎಂಜಿನಿಯರ್ ಹೋಗಿದ್ದರು. ಅಲ್ಲಿ ಏನು ದುರಸ್ತಿ ಮಾಡಬೇಕೊ ಅದನ್ನೆಲ್ಲ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ತೊಂದರೆ ಇಲ್ಲ ಎಂದು ಹೇಳುವುದಿಲ್ಲ. ರೈತರ ಸಮಸ್ಯೆ ಜ್ವಲಂತವಾಗಿದೆ. ಇವತ್ತು ತಾವು ಹೊಸ ಸಮಸ್ಯೆಗಳನ್ನು ತಾವು ಹೇಳಿದಿರಿ. ನಾವು ಮುಖ್ಯ ಎಂಜಿನಿಯರ್‌ರವರನ್ನು ಇವತ್ತೇ ಕಳುಹಿಸುತ್ತೇವೆ. ಇವತ್ತೇ ಕಳಿಸಿ, ಅಲ್ಲಿ ಸ್ಥಳೀಯವಾಗಿ ಏನು ದುರಸ್ತಿ ಮಾಡಬೇಕು, ಏನು ಸಲಹೆ ಮಾಡುವುದಕ್ಕೆ ಸಾಧ್ಯ ಇದೆ, ಅದನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಇವತ್ತು ಇಷ್ಟು ಆಶ್ವಾಸನೆ ನಾವು ಕೊಡುತ್ತಿದ್ದೇವೆ.

Practically the whole KEB with lock, stock and barrel is in Kolar District Since ten days.

MR. SPEAKER : It is shuttling between Mulbagal and Kolar...

ಶ್ರೀ ಹೆಚ್. ಏಕಾಂತಯ್ಯ : ಅಲ್ಲೇ ಇದ್ದರೆ ನಮ್ಮ ಗತಿ ಏನು? ನಮ್ಮ ಕಡೆಗೂ ಹೋಗುವುದಕ್ಕೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಶಾಸಕರು ಕೆ.ಇ.ಬಿ. ವಿಚಾರದಲ್ಲಿ ಸಾಕಷ್ಟು ತಿಳಿದುಕೊಂಡಿದ್ದಾರೆ. ಅದಕ್ಕಾಗಿ ಮುಖ್ಯ ಎಂಜಿನಿಯರ್‌ರವರನ್ನು ನಾವು ಕಳುಹಿಸುತ್ತೇವೆ. ಏನೇನು ಪರಿಹಾರ ಮಾಡುವುದಕ್ಕೆ ಸಾಧ್ಯ ಇದೆ, ಅದರ ಬಗ್ಗೆ ರೈತರನ್ನು ಭೇಟಿ ಮಾಡಿ ಸಮಸ್ಯೆ ಪರಿಹಾರ ಮಾಡುವುದಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ. ಕಳೆದ ಬಾರಿ ಶಾಸಕರನ್ನು ಕರೆಯಬೇಕಾಗಿತ್ತು. ಆದರೂ ಕೆ.ಇ.ಬಿ. ಸುಮ್ಮನೆ ಕುಳಿತುಕೊಂಡಿಲ್ಲ. ಕೆಲವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಸದನ ಮುಗಿಯುವ ಮೊದಲು ತಮ್ಮನ್ನೆಲ್ಲಾ ಕರೆಸಿ ಏನೇನು ಸಮಸ್ಯೆಗಳು ಇವೆ ಅದನ್ನು ತಿಳಿದುಕೊಳ್ಳುತ್ತೇವೆ. ಹೊಸ ನೀತಿಯ ವಿಚಾರ ತಾವು ಪ್ರಸ್ತಾಪ ಮಾಡಿದ್ದೀರಿ. ವಿದ್ಯುತ್ ಸರಬರಾಜು ಬಗ್ಗೆ ಹೊಸ ನೀತಿಯನ್ನು ಪ್ರಸ್ತಾಪ ಮಾಡಿದ್ದೀರಿ. ಹೊಸ ನೀತಿಯ ಬಗ್ಗೆ ಇವತ್ತು ಸ್ಟಾಟ್ ಡಿಸಿಷನ್ ಹೇಳುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು 60 ಸಾವಿರ ಪಂಪ್‌ಸೆಟ್‌ಗಳಲ್ಲಿ ವಿದ್ಯುತ್ ಸಂಪರ್ಕ ಏನೂ ಮಾಡಿಲ್ಲ ಎಂದು ಹೇಳಿದರು. 51 ಸಾವಿರ ಚಿಲ್ಲರೆ ಪಂಪ್‌ಸೆಟ್ಸ್ ಎನರ್ಜೈಸ್ ಮಾಡಿರುತ್ತೇವೆ ಎಂದು ಹೇಳಿದ್ದೇವೆ. ತಂತಿ ಕಂಬ ಇಲ್ಲದಿದ್ದರೆ ಮಾರ್ಚ್ ತಿಂಗಳ ಒಂದು ವಾರದ ಒಳಗೆ 51 ಸಾವಿರ ಪಂಪ್‌ಸೆಟ್ಸ್ ಹೇಗೆ ಎನರ್ಜೈಸ್ ಮಾಡುವುದು. ಇದನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬಂಡೆಗಲ್ಲು ಅವರೋ ನಾವೋ ಎಂಬ ಪ್ರಶ್ನೆ ಮಾಡಬೇಕಾಗುತ್ತದೆ. ಇಷ್ಟು ಹೇಳಿದರೂ ಈ ರೀತಿ ಮಾಡಿದರೆ ಬಂಡೆಗಲ್ಲು ಅವರಾಗುತ್ತಾರೆ ನಾವು ಆಗುವುದಿಲ್ಲ. ಈ ಸಮಸ್ಯೆ ಬಹಳ ಜ್ವಲಂತವಾಗಿದೆ. ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಇದರ ಬಗ್ಗೆ ಯೋಜನೆ ತಯಾರು ಮಾಡಿಕೊಂಡು ಪರಿಹಾರ ಮಾಡಬೇಕಾಗುತ್ತದೆ. ಇದು ಸಿಸ್ಟಮ್ ಇಂಪ್ರೊವ್‌ಮೆಂಟ್ ಸಮಸ್ಯೆ ಇದೆ. ವಿದ್ಯುತ್ ಉತ್ಪಾದನೆಗೆ ನಾವು ಎಷ್ಟು ಪ್ರಾಮುಖ್ಯತೆ ಕೊಡುತ್ತೇವೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಸಿಸ್ಟಮ್ ಇಂಪ್ರೊವ್‌ಮೆಂಟ್‌ಗೂ ಕೂಡಾ ಕೊಡಬೇಕಾಗಿತ್ತು. ಆದರೆ ಕೊಟ್ಟಿರುವುದಿಲ್ಲ. ಕೊಡದಿದ್ದರೆ ಈ ಸಮಸ್ಯೆ ಇನ್ನೂ ಅಸ್ತವ್ಯಸ್ತವಾಗಿ ಉಳಿಯುತ್ತದೆ. ಸಿಸ್ಟಮ್ ಇಂಪ್ರೊವ್‌ಮೆಂಟ್‌ಗೆ ನಾವು ಬಹಳಷ್ಟು ಪ್ರಾಮುಖ್ಯತೆಯನ್ನು ಕೊಟ್ಟು ಒಂದೆರಡು ವರ್ಷದಿಂದ ಪ್ರಯತ್ನ ನಡೆಸುತ್ತಿದ್ದೇವೆ. ಅದಕ್ಕೆ ಸಮಾಲೋಚನೆ ಮಾಡೋಣ. ಏನಾದರೂ ಹೊಸ ಸೂಚನೆಗಳನ್ನು ಕೊಟ್ಟರೆ ನಾವು ವಿಚಾರ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಆಪಾದನೆಯನ್ನು ಮಾನ್ಯ ಬೈರೇಗೌಡರು ಮಾಡಿದ್ದಾರೆ. It has gone on record.

ಅಧ್ಯಕ್ಷರು : ರೆಕಾರ್ಡ್‌ಗೆ ಹೋಗಿಲ್ಲ

SRI M. VEERAPPA MOILY : If you stage a walk out, the Chief Engineer will not go to Kolar.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಬೈರೇಗೌಡರು ಒಂದು ಆಪಾದನೆ ಮಾಡಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ಈ ವಿಚಾರದಲ್ಲಿ ಸಲಹೆ ಕೊಡಬೇಕೆಂದು ನಾನು ಮೂರು ಸಲ ಎದ್ದೆ. ಅವಕಾಶ ಕೊಡಲಿಲ್ಲ ನನಗೂ ಸ್ವಲ್ಪ ಅವಕಾಶ ಕೊಡಿ ಎಂದು ಕೇಳಿದರೆ, ನೀವು ಮಲೆನಾಡಿನವರು, ನಿಮಗೆ ವಿದ್ಯುಚ್ಛಕ್ತಿ ಬಗ್ಗೆ

ಆಸಕ್ತಿ ಇಲ್ಲ ಎಂದು ಅವರು ಹೇಳಿದರು. ಅದು ರೆಕಾರ್ಡ್‌ಗೆ ಹೋದರೆ, ನಾನು ವಿರೋಧ ಪಕ್ಷದ ನಾಯಕನಾಗಿ ಚರ್ಚೆ ಮಾಡುವುದು ಹೇಗೆ? ನಾವು ಒಂದು ರಾಜಕೀಯ ಪಕ್ಷಕ್ಕೆ ಸೇರಿದವರು ಇಂತಹ ಆಪಾದನೆಗಳು ಅಲ್ಲಿ ಹೋಗಕೂಡುದು. ನನ್ನ ಸಲಹೆ ಏನೆಂದರೆ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಡಿ. ವಿಸ್ತೃತವಾಗಿ ಚರ್ಚೆ ಮಾಡೋಣ. ಇದರ ಬಗ್ಗೆ ಹೇಳುವುದು ಬೇಕಾದಷ್ಟು ಇದೆ. ಈಗ ಅವರು ಏನು ಆಪಾದನೆ ಮಾಡಿದ್ದಾರೆ ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. I cannot function here as a leader of the Opposition. No such allegations should be made.

ಅಧ್ಯಕ್ಷರು : ವಾಪಸ್ ತೆಗೆದುಕೊಳ್ಳಿ

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮೂರು ಸಾರಿ ಎದ್ದದ್ದೂ ಕೂಡ ಅವರ ಪರವಾಗಿ ಹೇಳುವುದಕ್ಕಾಗಿ .

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಅವರ ಮೇಲೆ ಆಪಾದನೆ ಮಾಡಬೇಕನ್ನತಕ್ಕಂಥಾದ್ದಲ್ಲ. ಈ ವಿಚಾರ ಬಹಳ ಗಂಭೀರವಾಗಿದೆ. ಇದು ರಾಜ್ಯಾದ್ಯಂತ ಇರತಕ್ಕಂಥ ಪರಿಸ್ಥಿತಿ . ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಬೆಳೆ ಒಣಗಿ ಹೋಗಿ ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಅದರ ಪ್ರತಿಬಿಂಬ ಇಲ್ಲಿ ಆಗುತ್ತಿಲ್ಲ ಎನ್ನುವುದೇ ಹೊರತು ಬೇರೇನೂ ಅಲ್ಲ. ನಾನು ಅವರ ಮೇಲೆ ಆರೋಪ ಹೊರಿಸತಕ್ಕಂಥಾದ್ದಾಗಲಿ ಅಥವಾ ತಮ್ಮ ಮನಸ್ಸಿಗೆ ನೋವು ತರಬೇಕೆನ್ನುವುದಾಗಲಿ ನನಗೆ ಇಲ್ಲ. ಅದರ ಪ್ರತಿಬಿಂಬ ಇಲ್ಲಿ ಆಗಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೋಸ್ಕರ ಅವರಿಗೆ ತಾವು ಅವಕಾಶ ಕೊಟ್ಟಿದ್ದೀರಿ ಎನ್ನುವ ಕಾರಣಕ್ಕಾಗಿ ನಾವು ಕುಳಿತಿದ್ದೆವು.

ಅಧ್ಯಕ್ಷರು : ಇದರ ಬಗ್ಗೆ ಸಾಕಷ್ಟು ಸಮಯ ಆಗಿದೆ. ಸರ್ಕಾರದವರು ಈ ವಿಷಯದ ಬಗ್ಗೆ ಚರ್ಚೆಗೆ ಸಿದ್ಧ ಎಂದು ಹೇಳಿದ್ದಾರೆ. ಅದಕ್ಕೆ ಈ ವಿಷಯವನ್ನು ಚರ್ಚೆ ಮಾಡಲು ನಾನು ಇನ್ನೊಂದು ದಿವಸ ಅವಕಾಶ ಮಾಡಿ ಕೊಡುತ್ತೇನೆ.

ಡಾ. ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬೈರೇಗೌಡರು ವಾಕ್‌ಔಟ್ ಮಾಡಿದರೆ ನಾವು ಮುಖ್ಯ ಇಂಜಿನಿಯರ್‌ರವರನ್ನು ಅಲ್ಲಿಗೆ ಕಳುಹಿಸಿಕೊಡುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಸಾಧ್ಯವಿಲ್ಲ. He cannot get away with that. It is wrong. He cannot say like that. ಸಭಾತ್ಯಾಗ ಮಾಡುವುದು ಸದಸ್ಯರ ಹಕ್ಕು. ಆದರೆ ಅವರು ಹಕ್ಕುಚ್ಯುತಿಯಾಗಿ ಮಾತನಾಡುತ್ತಾರೆ. ಅದು ತಪ್ಪು ನಾನು ಸುಮ್ಮನೆ ಕುಳಿತುಕೊಂಡಿದ್ದೆ. ಯಾವುದಕ್ಕೂ ಒಂದು ಮಿತಿ ಇದೆ. ಸರ್ಕಾರ ಯಾವುದೇ ವ್ಯವಸ್ಥೆಯಲ್ಲಿದ್ದರೂ ಕೂಡ ಬೈರೇಗೌಡರು ವಾಕ್‌ಔಟ್ ಮಾಡಿದರೆ ನಾವು ಮುಖ್ಯ ಇಂಜನಿಯರ್‌ರವರನ್ನು ಕಳುಹಿಸಿಕೊಡುವುದಿಲ್ಲವೆಂದು ಹೇಳುವುದು ದುರಹಂಕಾರದ ಪರಮಾಧಿಯಾಗುತ್ತದೆ. ಅದು ಸಾಧ್ಯವಿಲ್ಲ.

(ಗೊಂದಲ)

Mr. SPEAKER : Dr. Alva, do you expect only the Speaker to be reasonable or do you expect the other Members also to be reasonable? Alright .Considering the importance of the matter raised by the hon.Member, even though it is not listed in the Agenda and even though I have not given prior notice of the matter to the Government, I let the issue be raised on the floor of the

House and the Hon.Minister was good enough to take note of the feelings of the Hon.Member and then give certain assurances. In spite of that assurance, if a threat is held out by the Hon. Member that I am going to stage a walk-out, then the Government is free to take whatever steps it deems fit. It the Government was unreasonable , adamant, then I can understand a threat being held out to walk-out. But, the Government had almost surrendered itself. The Hon.Minister gave a solemn assurance on the floor of the House that the entire Electricity Board and the Chief Engineer to go over there to see what is happening and take steps to remedy the situation. These are not healthy trends.

DR. JEEVARAJ ALVA : Sir, the hon.Member was trying to impress upon the Government the gravity of the situation. I was very much here. I went through the Statement. The Government conceded and accepted to send the Chief Engineer. But, just because threat held out to walk-out by the hon.Memer, the Minister concerned cannot say that he will not send the Chief Engineer, if he does so. It will be greatest injustice to the people who are suffering .

MR. SPEAKER : I declare the matter closed.

DR. JEEVARAJ ALVA : The hon.Member was well within his rights. The matter pertains to the Government and the people of Kolar and not of Mr. Byregowda and Mr. Veerappa Moily.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಒಂದೇ ಮಾತಿನಲ್ಲಿ ಮುಗಿಸುತ್ತೇನೆ. ಮಾನ್ಯ ಮಂತ್ರಿಗಳು 15 ಗಂಟೆಗಳ ಕಾಲ ಸತತವಾಗಿ ವಿದ್ಯುತ್ ಕೊಡುತ್ತೇವೆಂದು ಹೇಳಿದರು. ಆದರೆ ಆ ರೀತಿ ಇಲ್ಲ. 15 ಗಂಟೆಗಳ ಕಾಲ ವಿದ್ಯುತ್ ಕೊಟ್ಟರೆ ನಾನು ಆ ಸ್ಥಳದಲ್ಲಿಯೇ ಸಾಷ್ಟಾಂಗ ನಮಸ್ಕಾರ ಮಾಡಿ ಅವರನ್ನು ಕ್ಷಮೆ ಕೇಳುತ್ತೇನೆ ಎನ್ನುವ ಮಾತನ್ನು ಹೇಳಿದೆ. ಅವರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದಾಗ ನಾವೇನು ಮಾಡಬೇಕು?

ಅಧ್ಯಕ್ಷರು : ವಾಕ್ ಔಟ್ ಮಾಡಬೇಕು.

ಶ್ರೀ ಸಿ.ಬೈರೇಗೌಡ : ಅದಕ್ಕೋಸ್ಕರವೇ ವಾಕ್‌ಔಟ್ ಮಾಡುತ್ತೇನೆ ಎಂದು ಹೇಳಿದ್ದು. ಮುಖ್ಯ ಇಂಜನಿಯರನ್ನು ಕಳುಹಿಸುವುದಿಲ್ಲ ಎಂದು ಅವರು ಹೇಳಿದಾಗ ನಾವು ಏನು ಮಾಡಬೇಕು.

ಡಿ.ಬಿ. ಚಂದ್ರೇಗೌಡ : ಈ ಪ್ರಕರಣವನ್ನು ಮುಗಿಸಿದ ನಂತರ ಬೇರೆ ಕಾಠ್ಯಕಲಾಪಕ್ಕೆ ಹೋಗುವುದು ಒಳ್ಳೆಯದು. ಮಾನ್ಯ ಬೈರೇಗೌಡರು ಕಳಕಳಿ ಸರ್ಕಾರಕ್ಕೆ ಅರ್ಥವಾಗುತ್ತದೆ ಎಂದು ನಾನು ಸುಮ್ಮನೆ ಕುಳಿತಿದ್ದೆ ಆದರೆ ಅವರು ಹೇಳಿದ್ದಕ್ಕೆ ಇವರು ಚೀಫ್ ಇಂಜಿನೀಯರ್‌ರನ್ನು ಕಳುಹಿಸುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ: ಸನ್ಮಾನ್ಯ ಅಧ್ಯಕ್ಷರೆ ತಾವು ಹೇಳಿದ್ದೀರಿ ನಾನು ಅದನ್ನು ಪುನಃ ಉಚ್ಚರಿಸಬೇಕಾದ ಅವಶ್ಯಕತೆಯಿಲ್ಲ, ಬಿಸ್‌ನೆಸ್ ಲಿಸ್ಟ್‌ನಲ್ಲಿ ಇಲ್ಲದಿದ್ದರೂ the Govrmnent went out of the way in giving statement in response to the problem of the hon.Member.

ಏಕೆಂದರೆ ತಾವು ಹೇಳಿದ ಪ್ರಕಾರ ಇವತ್ತು ಏನಾದರೂ ಪ್ರತಿಷ್ಠೆ ಮೇಲೆ.... Yesterday also the hon. Member raised this. Today also he has raised it. I said whatever the Government has done in the matter.

ಫೆಬ್ರವರಿ 28ನೇ ತಾರೀಖು ಛೇರ್ಮನ್‌ರು ಹೋಗಿ ಅಲ್ಲಿನ ಸಮಸ್ಯೆಯನ್ನು ಅಧ್ಯಾಯನ ಮಾಡಿಕೊಂಡು ಬಂದಿದ್ದಾರೆ. ಸ್ಪಾಟ್‌ನಲ್ಲಿ ಕೆಲವು ಡಿಸೀಷನ್ ತೆಗೆದುಕೊಂಡಿದ್ದಾರೆ. ಅದರ ಮೇಲೆ ಕೆಲವು ಸಮಸ್ಯೆಗಳು ಉದ್ಭವವಾಗಿದೆ ಎಂದು ತಾವು ಇವತ್ತು ಏನು ಹೇಳಿದ್ದೀರಿ, ನಾವು ಸಹಾ ಅದರ ಬಗ್ಗೆ ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ.

I went out of the way. ತಮಗೆ ಗೊತ್ತಿದೆ ಕರ್ನಾಟಕ ರಾಜ್ಯದ ವಿದ್ಯುತ್ ಸರಬರಾಜು ನೋಡತಕ್ಕಂಥ ಜವಾಬ್ದಾರಿ ಯಾರಿಗಿದೆ? ಸರ್ಕಾರಕ್ಕಿದೆ. If the K.E.B. concentrates only on one District, what would happen to the rest of the places. But still we are doing because we have to give respect to the hon. Member, We don't mind taking up this. ಅವರು ವಾಕ್‌ಔಟ್ ಮಾಡುತ್ತೇನೆಂದು ನಮ್ಮಿಂದ ಯಾವುದೇ ಪ್ರಚೋದನೆ ಇರಲಿಲ್ಲ, ಪ್ರಚೋದನೆ ಇದ್ದಿದ್ದರೆ ಅದಾಗಬಹುದಾಗಿತ್ತು. I am very sorry. ನಾವು ಇಷ್ಟು ಉದಾತ್ತತೆಯನ್ನು ತೋರಿಸಿದರೂ ದುರಹಂಕಾರವೆಂದು ಮ್ಮ ಡಿಕ್ಷ್ನರಿಯಲ್ಲಿದ್ದರೆ

DR JEEVARAJ ALVA: I am very sorry. I did not use it.

ಶ್ರೀ ಎಂ ವೀರಪ್ಪ ಮೊಯಿಲಿ: ಆದರೆ ಯಾವ ಸಂಧರ್ಬದಲ್ಲಿ ಯಾವುದಕ್ಕೆ ಯಾವ ಶಬ್ದವನ್ನು ಉಪಯೋಗ ಮಾಡಬೇಕು ಎನ್ನುವ ಈ ಆಯ್ಕೆ ಮುಖ್ಯವಾದುದು. ತಾವು ಒಮ್ಮೆಲೆ ಸಡನ್ನಾಗಿ ದುರಹಂಕಾರ ಎನ್ನುವ ಶಬ್ದ ಏನು ಉಪಯೋಗ ಮಾಡಿದ್ದೀರಿ ಬಹುಶಃ ಆ ಶಬ್ದ ಈ ಕಡೆ ಬರುವುದಿಲ್ಲ, ಮಾನ್ಯ ಭೈರೇಗೌಡರು ಏನು ಹೇಳಿದ್ದಾರೆ ಅದಕ್ಕೆ ನಮ್ಮ ಸಹಮತ ಇದೆ. ನಾವು ಅದಕ್ಕೆ ಸ್ಪಂದಿಸುತ್ತೇವೆ. Here is a Government which will respond and which has responded more adequately than what is required. We are sending the Chief Engineer. I said 'Don't walk-out co-operate with the Government.'. We are here to solve the problem.

MR. SPEAKER : I admire the reasonableness shown by every section of the House.

SRI D.B.CHANDRE GOWDA: The Hon.Home Minister is here. ಇವತ್ತು ಬೆಳಗಿನ ಬೀದರ್‌ನಲ್ಲಿ ಡಕಾಯಿತಿ ಆಗಿದೆ. ಬೆಂಗಳೂರು ನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಡಕಾಯಿತಿಯಾಗುತ್ತಿದೆ. ಈ ತಿಂಗಳಲ್ಲಿ ಡಕಾಯಿತಿಗಳು ಪದೇಪದೇ ಏಳಿಂಟು ಕಡೆ ಆಗಿದೆ. ಮೊನ್ನೆ ರಾಮನಗರ, ಕೋಲಾರ, ಮಂಡ್ಯಾದಲ್ಲೂ ಆಯಿತು. ಇದರ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡಬೇಕು. I would demand the statement from the Hon.Minister.

MR. SPEAKER: I will direct the Government to make a statement on this.

ಶ್ರೀ ಎಂ. ನಾರಾಯಣ ಸ್ವಾಮಿ: ಮಾನ್ಯ ಅಧ್ಯಕ್ಷರೇ ನಮ್ಮ ಬಂಗಾರಪೇಟೆ ತಾಲ್ಲೂಕಿನಲ್ಲಿ ಬಡ ರೈತರ ಸಾಮಾನುಗಳನ್ನು ಹರಾಜು ಹಾಕುತ್ತಿದ್ದಾರೆ. ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಸಹಕಾರ ಸಚಿವರು ಏನಾದರೂ ಸ್ಟೇಟ್‌ಮೆಂಟ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಹೆಚ್. ಪಾಟೀಲ್: ಮಾನ್ಯ ಅಧ್ಯಕ್ಷರೇ ಅನೇಕ ಸಲ ಈ ಸದನದೊಳಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದೇವೆ. ನಾನು ಕೊಟ್ಟಿದ್ದೇನೆ. ಮುಖ್ಯಮಂತ್ರಿಯವರೂ ಕೊಟ್ಟಿದ್ದಾರೆ. ಮಾರ್ಚ್ 31ರವರೆಗೆ ಯಾವುದೇ ರೀತಿಯ ಸಾಲವನ್ನು ಕಡ್ಡಾಯವಾಗಿ ವಸೂಲು ಮಾಡುವುದಿಲ್ಲವೆಂದು ಹೇಳಿದ್ದೇವೆ. ಹಾಗೇನಾದರೂ ಬಲವಂತವಾಗಿ ಸಾಲ ವಸೂಲಿ ಮಾಡಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಎಂ ನಾರಾಯಣ ಸ್ವಾಮಿ: ಮಾನ್ಯ ಅಧ್ಯಕ್ಷರೇ ಬಂಗಾರ ಪೇಟೆ ತಾಲ್ಲೂಕಿನಲ್ಲಿ

ಅಧ್ಯಕ್ಷರು: ನೀವು ಸಚಿವರ ಗಮನಕ್ಕೆ ತನ್ನಿ

ಶ್ರೀ ಎಂ ನಾರಾಯಣಸ್ವಾಮಿ: ನಾನು ನೋಟೀಸ್ ಕೊಟ್ಟಿದ್ದೇನೆ

ಅಧ್ಯಕ್ಷರು: ನೋಟೀಸ್ ಕೊಟ್ಟರೆ ಆಗುವುದಿಲ್ಲ. ಅವರ ಗಮನಕ್ಕೆ ತನ್ನಿ.

ಪ್ರೋ ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಸಭಾಧ್ಯಕ್ಷರೇ ಈಗ ಆಗಿರುವುದು ಏನು ಅಂದರೆ ಹಿಂದಿನ ಹೇಳಿಕೆ ಪ್ರಾಕಾರ, 31ನೇ ಮಾರ್ಚ್ 1991 ರವರೆಗೆ ಗಡುವಿದೆ ಎಂದು ಹೇಳಿದ್ದರು.ಆದರೆ ಮೊನ್ನೆ ಮಾನ್ಯ ಮಂತ್ರಿಗಳು ನಮಗೆ ಆಶ್ವಾಸನೆ ಕೊಟ್ಟಿರುವುದು ಏನೆಂದರೆ ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಆ ಪ್ರತ್ರಕ್ಕೆ ಕ್ಲಾರಿಫಿಕೇಶನ್ ಬರುವವರೆಗೆ ನಾವು ವಸೂಲಿಯನ್ನು ತಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ಜೊತೆಗೆ ಮತ್ತೊಂದು ಮಾತನ್ನು ಹೇಳಿದ್ದಾರೆ. ಈ ಅಣೆವಾರಿ ಶರತ್ತು ಏನು ಇದೆ ಇದರ ಬಗ್ಗೆ ನಾವು 22ನೇ ತಾರೀಖು ಮಾತುಕತೆ ಮಾಡಿ ಬಗೆಹರಿಸಿಕೊಳ್ಳೋಣ ಎನ್ನುವ ಮಾತನ್ನು ಹೇಳಿದ್ದಾರೆ. ಆ ಕಾರಣ ಇದು ಕೇವಲ 10ಸಾವಿರ ರೂಪಾಯಿಗಳ ಕೆಳಗಿನ ಅಥವಾ ಮೇಲಿನ ಪ್ರಶ್ನೆ ಅಲ್ಲ. ಅಣೆವಾರಿ ಶರತ್ತನ್ನು ನಾವು ತೆಗೆದರೆ ಸಾಲ ವಿಮೋಚನೆ ಯೋಜನೆ ಹೆಚ್ಚಿನ ಸಂಖ್ಯೆಯ ರೈತರಿಗೆ ಅನ್ವಯಿಸುತ್ತದೆ. ಆ ಕಾರಣ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದಿಂದ ಸ್ಪಷ್ಟೀಕರಣ ಬರುವವರೆಗೆ ವಸೂಲಾತಿಯನ್ನು ನಿಲ್ಲಿಸುತ್ತೇವೆ ಎಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ತಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಸ್ಪಷೀಕರಣ ಕೊಡುವುದಕ್ಕಿಂತ ಹೆಚ್ಚಾಗಿ ದಯಮಾಡಿ ಸಹಕಾರ ಮಂತ್ರಿಗಳಿಗೆ ಸ್ಪಷ್ಟೀಕರಣ ಕೊಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಆ ಕಾರಣ ತಾವು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿ ಹೇಳಿಕೆ ಕೊಡಿಸಿದರೆ ಒಳ್ಳೆಯದು ಎಂದು ನನ್ನ ಭಾವನೆ.

ಶ್ರೀ ಕೆ.ಹೆಚ್. ಪಾಟೀಲ್: ಈಗಾಗಲೇ ಅನೇಕಸಲ ನಾನೂ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಸಹ ಹೇಳಿದ್ದಾರೆ. ಕೇಂದ್ರದಿಂದ ಎಷ್ಟು ಹಣ ಬಂದಿದೆ ಎನ್ನುವ ಬಗ್ಗೆ ಸಹ ಹೇಳಿದ್ದಾರೆ. ಪುನಃ ಪುನಃ ಈ ವಿಷಯವನ್ನು ಪರಿಶೀಲನೆ ಮಾಡುವುದರಲ್ಲಿ ಏನು ಅರ್ಥ ಇದೆ? ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಆಶ್ವಾಸನೆ ಅದು ನನ್ನ ಮೇಲೆ ಸಹ ಬಂಧನಕಾರಕ ಇದೆ.